<u>ಮಂಗಳೂರು ವಿಶ್ವವಿದ್ಯಾನಿಲಯ</u>

ದಿನಾಂಕ 28.10.2020ರಂದು ಪೂರ್ವಾಹ್ನ ಗಂಟೆ 10:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2020ನೇ ಸಾಲಿನ ಆರನೇ ಸಾಮಾನ್ಯ ಸಭೆಯ ನಡವಳಿಗಳು.

ಉಪಸ್ಥಿತರು

ಅನುಪಸ್ಥಿತರು

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು. ಸಭೆಯನ್ನು ಮುಂದುವರಿಸುವಂತೆ ಮಾನ್ಯ ಕುಲಪತಿಗಳನ್ನು ವಿನಂತಿಸಿದರು.

I. 2018ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿನಿಯೊಬ್ಬರು ರಾಜ್ಯ ಮಹಿಳಾ ಆಯೋಗಕ್ಕೆ ದೂರು ನೀಡಿದ್ದು, ಈ ಬಗ್ಗೆ ತನಿಖೆ ನಡೆಸಿದ ICC ಯು ನೀಡಿದ ವರದಿಯಂತೆ ನಿಯಮಾನುಸಾರ ಕ್ರಮ ಕೈಗೊಳ್ಳುವ ಬಗ್ಗೆ;

"The matter pertaining to the report of the ICC dated 20.12.2018 with regard to sexual harassment by Prof. Arabi U. is taken up for consideration by the Syndicate under the Chairmanship of the Hon'ble Vice Chancellor.

The Syndicate has carefully examined the report of the ICC dated 20.12.2018 and the materials / evidences considered and relied upon by the ICC. The Syndicate has further carefully scrutinized the testimony of the witnesses, based on which the ICC has submitted the report. The reasons assigned by the ICC in support of its report are also carefully analyzed in light of the complaint of the victim and having regard to the entire facts and circumstances of the case.

The Syndicate has also carefully considered the representation dated 30-01-2019 submitted by Prof. Arabi U and has given anxious consideration to each and every aspect and grounds urged by Prof. Arabi U. The said representation is hopelessly barred by law of limitation. Further, no reason has been assigned explaining the delay. Notwithstanding the same, the Syndicate has consciously considered the grounds urged therein on merit with an open mind. The grounds attacking the ICC report do not have any merit are substance in them. Prof. Arabi has colossally failed to show as to how the ICC report is per se false or baseless. The Syndicate is of the opinion that the objections of Prof. Arabi U have been made for the sake of opposing the report of ICC. Hence, the Syndicate is left with no other choice than to reject his objections as baseless.

The report of ICC provides overwhelming evidence and the Syndicate is in complete agreement with the same. The entire episode shocks the conscious of the Syndicate. Hence, the Syndicate considers this as a fit case in the interest of justice to propose the action of imposition of penalty on Prof. Arabi U. in accordance with law.

Since the misconduct committed by Prof. Arabi U. is major and serious, the Syndicate proposes to impose major punishment of dismissal. However, the Syndicate deems it fit and proper to issue a show cause notice Dr. Arabi U as to why the punishment of dismissal shall not be imposed by serving 15 days clear notice with immediate effect considering the gravity of the situation.

Further, since the victim has communicated to the University specifically expressing the consent to initiate appropriate legal action against the delinquent Prof. Arabi U. the Syndicate apprehends that there is every danger of victimizing the victim of sexual harassment, destruction of evidence, threat to the witnesses in view of the fact that the delinquent professor namely Prof. Arabi U. is still in service and very much available in the campus of the University holding an influential position of Research Guide, having regard to various relevant factors the Syndicate deems it fit and proper to

place Prof. Arabi U. under suspension for one month or until the completion process of hearing of Dr. Arabi U. with regard to the proposed punishment is heard, whichever is earlier. This resolution has been passed by the Syndicate unanimously after holding detailed deliberations at length by each and every member".

The Syndicate has also unanimously resolved to recommend to The Principal Secretary to the Government (Higher Education), Govt. of Karnataka to initiate appropriate disciplinary action against Prof. A. M. Khan, who was serving as the Registrar, in respect of serious dereliction of duty committed particularly in handling the case of sexual harassment of Ms. XYC (Name of the victim is not disclosed, but available in record). Despite the submission of report by ICC on 20.12.2018. Prof. A. M. Khan the then Registrar, had not taken the said report on record during the course of official proceedings, nor brought the same to the notice of Vice Chancellor nor the then Syndicate. Further, he has not taken the representation on Prof. Arabi U dated 31.01.2019 on record. The report of the ICC dated 20.12.2018 came to light only when the communication to this effect was received from the Karnataka State Women's Commission. The present Registrar has brought the said report to the notice of the Syndicate of Mangalore University on 09.10.2020. The Syndicate is of the view that Prof. Khan has committed grave misconduct by abdicating the statutory obligations enjoined on him besides tarnishing the image of the University. The Syndicate has taken cognizance of this laxcity and considers this as a fit case to initiating action in accordance with law. Hence, appropriate disciplinary action may be initiated againist him by the Hon'ble Government of Karnataka.

## II. ನಡವಳಿಗಳ ದೃಢೀಕರಣ

**ದಿನಾಂಕ 09.10.2020ರಂದು ನಡೆದ 2020ನೇ ಸಾಲಿನ ಐದನೇ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ.**

ದಿನಾಂಕ 09.10.2020ರಂದು ನಡೆದ 2020ನೇ ಸಾಲಿನ ಐದನೇ ಸಾಮಾನ್ಯ ಸಭೆಯ ಪ್ರಾರಂಭಿಕದಲ್ಲಿ ಕೈಗೊಂಡ IQAC ಸಲಹಾ ಸಮಿತಿ ಸಭೆಯ ನಡಾವಳಿ ಹಾಗೂ 2018–19ರ ಕರಡು AQAR ಅನ್ನು ಅನುಮೋದಿಸಲಾಯಿತು.

ದಿನಾಂಕ 09.10.2020ರಂದು ನಡೆದ 2020ನೇ ಸಾಲಿನ ಐದನೇ **ಸಾಮಾನ್ಯ ಸಭೆಯ** ನಡವಳಿಯನ್ನು ಈ ಕೆಳಗಿನ ತಿದ್ದುಪಡಿಗಳೊಂದಿಗೆ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್ ಸಾ.ಸ.5:18(2020)

**ವಿಷಯ:** ಶ್ರೀ ರಮೇಶ ಕೆ., ಸಿಂಡಿಕೇಟ್ ಸದಸ್ಯರು ಇವರು ಘಟಕ ಕಾಲೇಜುಗಳಲ್ಲಿ ಪ್ರಾಂಶುಪಾಲರ ನೇಮಕಾತಿಗೆ ಅನುಸರಿಸುವ ಮಾನದಂಡದ ಕುರಿತು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ.

1. **ಘಟಕ ಕಾಲೇಜುಗಳಲ್ಲಿ ಪ್ರಾಂಶುಪಾಲರ ನೇಮಕಾತಿಗೆ ಅನುಸರಿಸುವ ಮಾನದಂಡದ ಕುರಿತು.**

**ತಿದ್ದುಪಡಿ ನಿರ್ಣಯ:** ಘಟಕ ಕಾಲೇಜುಗಳಲ್ಲಿ ಪ್ರಾಂಶುಪಾಲರ ನೇಮಕಾತಿಗೆ ಅನುಸರಿಸುವ ಮಾನದಂಡದ ಕುರಿತಂತೆ ಸುಮಾರು 25 ನಿಮಿಷಗಳ ಚರ್ಚೆ ನಡೆದಿರುತ್ತದೆ. ಈ ಚರ್ಚೆಯಲ್ಲಿ 18 ಸಿಂಡಿಕೇಟ್ ನಡೆದಿರುತ್ತದೆ. ಈ ಚರ್ಚೆಯಲ್ಲಿ 18 ಸಿಂಡಿಕೇಟು ಸದಸ್ಯರುಗಳ ಪೈಕಿ 18 ಸಿಂಡಿಕೇಟು ಸದಸ್ಯರುಗಳು ಭಾಗವಹಿಸಿದ್ದರು. ಸಭಾಧ್ಯಕ್ಷರಾದ ಗೌರವಾನ್ವಿತ ಕುಲಪತಿಯವರು ಪ್ರಭಾರ / ಖಾಯಂ ಪ್ರಾಂಶುಪಾಲರುಗಳ ಆಯ್ಕೆಗೆ ಸಂಬಂಧಿಸಿ, ನಿಯಮಾವಳಿಯನ್ನು ಸಭೆಗೆ ನೀಡಿರುತ್ತಾರೆ. ಈ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯ ಕಾಲೇಜು, ಹಂಪನಕಟ್ಟೆ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ. ಉದಯಕುಮಾರ್ ಎಂ. ಎ. ಮತ್ತು ಡಾ. ಅನಿತಾ ರವಿಶಂಕರ್ ಇವರುಗಳಿಗೆ ನಿಯಮಾವಳಿ ಪ್ರಕಾರ ಅವಧಿ ಮುಗಿದಿರುತ್ತದೆ. ಇದರ ಅವಧಿಯನ್ನು ಮುಂದುವರಿಸಲು ಸಾಧ್ಯವಿಲ್ಲವೆಂದು ಒಮ್ಮತದಿಂದ ಎಲ್ಲಾ ಸಿಂಡಿಕೇಟು ಸದಸ್ಯರು ನಿರ್ಣಯಿಸಿರುತ್ತಾರೆ. ಆದುದರಿಂದ ಸದರಿಯವರುಗಳನ್ನು ಪ್ರಾಂಶುಪಾಲರ ಪ್ರಭಾರದಿಂದ ಬಿಡುಗಡೆಗೊಳಿಬೇಕಾಗಿ ಸಿಂಡಿಕೇಟು ಸರ್ವಾನುಮತದಿಂದ ನಿರ್ಣಯಿಸಿತು. ಮುಂದುವರಿದು, ಪ್ರಾಂಶುಪಾಲರುಗಳ ಆಯ್ಕೆ ಸಂಬಂಧ ಘಟಕ ಕಾಲೇಜುಗಳ ಶಿಕ್ಷಕರ ಸಾಮಾನ್ಯ ಜೇಷ್ಠತಾ ಪಟ್ಟಿಯನ್ನು ರೋಸ್ಟರ್ ಮಾಹಿತಿಯೊಂದಿಗೆ

ತಯಾರಿಸಲು ಈ ಕೆಳಕಂಡ ಸಮಿತಿಯನ್ನು ರಚಿಸಲಾಗಿದೆ.

| | | |
|---|---|---|
| 1. | **ಡಾ. ಪಾರ್ವತಿ ಅಪ್ಪಯ್ಯ**<br>ಮಾನ್ಯ ಸಿಂಡಿಕೇಟು ಸದಸ್ಯರು | ಅಧ್ಯಕ್ಷರು |
| 2. | **ಶ್ರೀ ರವಿಚಂದ್ರ ಪಿ. ಎಂ.**<br>ಸಿಂಡಿಕೇಟು ಸದಸ್ಯರು | ಸದಸ್ಯರು |
| 3. | **ಪ್ರೊ. ಡಿ. ಶಿವಲಿಂಗಯ್ಯ**<br>ಸಿಂಡಿಕೇಟು ಸದಸ್ಯರು ಮತ್ತು ಪ್ರಾಧ್ಯಾಪಕರು, ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ | ಸದಸ್ಯರು |
| 4. | **ಪ್ರಾಂಶುಪಾಲರು**<br>ಎಫ್. ಎಂ. ಕೆ. ಎಂ. ಸಿ. ಕಾಲೇಜು,<br>ಮಡಿಕೇರಿ | ಸದಸ್ಯರು |
| 5. | **ಪ್ರಾಂಶುಪಾಲರು**<br>ವಿಶ್ವವಿದ್ಯಾನಿಲಯ ಕಾಲೇಜು<br>ಮಂಗಳೂರು | ಸದಸ್ಯ<br>ಸಂಚಾಲಕರು |

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ.5:24(2020)

**ವಿಷಯ:** ಶೈಕ್ಷಣಿಕ ವರ್ಷ 2020–21ನೇ ಸಾಲಿಗೆ ಹೊಸ ಸಂಯೋಜನೆ/ವಿಸ್ತರಣಾ ಸಂಯೋಜನೆ ನೀಡುವ ಕುರಿತು.

**ತಿದ್ದುಪಡಿ ನಿರ್ಣಯ:** ಶೈಕ್ಷಣಿಕ ವರ್ಷ 2020–21ನೇ ಸಾಲಿಗೆ ಹೊಸ ಸಂಯೋಜನೆ/ವಿಸ್ತರಣಾ ಸಂಯೋಜನೆಯನ್ನು ನೀಡುವ ಬಗ್ಗೆ ಕಾಲೇಜುವಾರು ಸ್ಥಳೀಯ ವಿಚಾರಣಾ ಸಮಿತಿಯು ನೀಡಿರುವ ವರದಿ ಮತ್ತು ಶೈಕ್ಷಣಿಕ ಮಂಡಳಿಯ ಗೊತ್ತುವಳಿಗಳನ್ನು ಪರಿಗಣಿಸಿ, ಕಾಲೇಜುಗಳ ಹೊಸ ಸಂಯೋಜನೆ/ವಿಸ್ತರಣಾ ಸಂಯೋಜನೆಗಳಿಗೆ ಸಂಬಂಧಿಸಿ, ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲು ಸೂಕ್ತ ಕ್ರಮಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಸದರಿ ಪ್ರಸ್ತಾವನೆಯಲ್ಲಿನ ಕ್ರಮ ಸಂಖ್ಯೆ 37 ರಲ್ಲಿನ ಸರಕಾರಿ ಪ್ರಥಮ ದರ್ಜೆ ಕಾಲೇಜು, ಕಾವೂರು ಮಂಗಳೂರು ಇಲ್ಲಿನ ಎಂ.ಕಾಂ. ಕಾರ್ಯಕ್ರಮದ ವಿಸ್ತರಣಾ ಸಂಯೋಜನೆಗೆ ಸಂಬಂಧಿಸಿ, ವಿದ್ಯಾರ್ಥಿ ಪರಿಮಿತಿ 30 ಎಂದು ಪರಿಗಣಿಸುವುದು.

ಕ್ರಮ ಸಂಖ್ಯೆ: 45 ರಲ್ಲಿನ ಸರಕಾರಿ ಪ್ರಥಮ ದರ್ಜೆ ಕಾಲೇಜು, ಕುಶಾಲನಗರ ಇಲ್ಲಿನ ಬಿ.ಕಾಂ. ಎರಡನೇ ವಿಭಾಗಕ್ಕೆ ಸಂಬಂಧಿಸಿ, ಇದೊಂದು ಸರ್ಕಾರಿ ಕಾಲೇಜಾದ ಕಾರಣ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯನ್ನು ಬಿ.ಕಾಂ. ಕಾರ್ಯಕ್ರಮದ ಎರಡನೇ ವಿಭಾಗಕ್ಕೆ 90 ವಿದ್ಯಾರ್ಥಿ ಪರಿಮಿತಿಯೊಂದಿಗೆ ಮುಂದುವರಿಕಾ ಸಂಯೋಜನೆಗೆ ಅನುಮತಿ ನೀಡಬಹುದೆಂಬುದಾಗಿ ನಿರ್ಣಯಿಸಲಾಯಿತು.

**ಇತರ ವಿಷಯಗಳು**

ಇತರ ವಿಷಯಗಳ ಕ್ರಮ ಸಂಖ್ಯೆ 15ರಲ್ಲಿ ಈ ಕೆಳಗಿನ ವಿಷಯವನ್ನು ಸೇರ್ಪಡಿಸಲು ನಿರ್ಣಯಿಸಲಾಯಿತು.

15. ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇದರ 150 ನೇ ವರ್ಷಾಚರಣೆಯ ಕಾರ್ಯಕ್ರಮದಲ್ಲಿ ಉಳಿದಿರುವ ಹಣವನ್ನು ವಿಶ್ವವಿದ್ಯಾನಿಲಯದ ಖಾತೆಗೆ ವರ್ಗಾಯಿಸಲು ತೀರ್ಮಾನಿಸಲಾಯಿತು.

## III. ಅನುಸರಣಾ ವರದಿಯ ಅನುಮೋದನೆ

ದಿನಾಂಕ 25.09.2020ರಂದು ನಡೆದ ಸಿಂಡಿಕೇಟಿನ 2020ನೇ ಸಾಲಿನ **ಸಿಂಡಿಕೇಟಿನ 2020ನೇ ಸಾಲಿನ ಚತುರ್ಥ ಸಾಮಾನ್ಯ ಸಭೆಯ** ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

**– ಅನುಮೋದಿಸಲಾಯಿತು. –**

## IV. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ/ಸಾ.ಸ.6:01(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಉದ್ಯೋಗ ಮಾಹಿತಿ ಕೇಂದ್ರ

ಕಟ್ಟಡದ ಮೊದಲನೇ ಅಂತಸ್ತಿನಲ್ಲಿ ಪರಿಸರ ವಿಜ್ಞಾನ ವಿಭಾಗ ಕಟ್ಟಡದ ನಿರ್ಮಾಣ – (1 ನೇ ಹಂತ) (RUSA) -ಅನುದಾನ– ಟೆಂಡರ್ ಅಂಗೀಕರಿಸುವ ಬಗ್ಗೆ.

ನಿರ್ಣಯ: ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಮಂವಿ/ಇಡಿ/ಸಾ.ಸ.6:02(2020)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಜೀವ ವಿಜ್ಞಾನ ಮತ್ತು ಅನ್ವಯಿಕ ಪ್ರಾಣಿ ಶಾಸ್ತ್ರ ವಿಭಾಗಕ್ಕೆ ಸಂಬಂಧಿಸಿದ ಉಗ್ರಾಣ ಕೊಠಡಿಗೆ ಮೇಲ್ಭಾಗದಲ್ಲಿ ಪ್ರಯೋಗಾಲಯಕ್ಕಾಗಿ ಮೊದಲ ಅಂತಸ್ತನ್ನು ನಿರ್ಮಿಸುವುದು –RUSAಅನುದಾನ– ಟೆಂಡರ್ ಅಂಗೀಕರಿಸುವ ಬಗ್ಗೆ.

ನಿರ್ಣಯ: ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಮಂವಿ/ಇಡಿ/ಸಾ.ಸ.6:03(2020)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಲೆಕ್ಚರ್ ಕಾಂಪ್ಲೆಕ್ಸ್ ಕಟ್ಟಡಕ್ಕೆ ಮಳೆ ನೀರು ಕೊಯಿಲು ವ್ಯವಸ್ಥೆಯನ್ನು ಅಳವಡಿಸುವುದು –RUSA ಅನುದಾನ –ಟೆಂಡರ್ ಅಂಗೀಕರಿಸುವ ಬಗ್ಗೆ.

ನಿರ್ಣಯ: ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಮಂವಿ/ಇಡಿ/ಸಾ.ಸ.6:04(2020)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಮಾನವಿಕ ಶಾಸ್ತ್ರ ಕಟ್ಟಡ (Humanity building)ಕ್ಕೆ ಮಳೆ ನೀರು ಕೊಯಿಲು ವ್ಯವಸ್ಥೆ(Rain water harvesting) ಕಲ್ಪಿಸುವುದು –RUSA -ಅನುದಾನ–ಟೆಂಡರ್ ಅಂಗೀಕರಿಸುವ ಬಗ್ಗೆ.

ನಿರ್ಣಯ: ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಮಂವಿ/ಇಡಿ/ಸಾ.ಸ.6:05(2020)

ವಿಷಯ: Construction of class room (including technologically enabled class rooms) for University College, Mangalore under component 9 of RUSA 2.0-ಅನುದಾನ–ಟೆಂಡರ್ ಅಂಗೀಕರಿಸುವ ಬಗ್ಗೆ.

ನಿರ್ಣಯ: ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಮಂವಿ/ಇಡಿ/ಸಾ.ಸ.6:06(2020)

ವಿಷಯ: Construction of Shree Narayana Guru Adhyayana Peeta Building at Manglore University Campus Mangalagangothri– ಅಂದಾಜು ಪಟ್ಟಿಗೆ ಘಟನೋತ್ತರ ಮಂಜೂರಾತಿ ಹಾಗೂ ಟೆಂಡರ್ ಅಂಗೀಕರಿಸುವ ಬಗ್ಗೆ.

ನಿರ್ಣಯ: ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಮಂವಿ/ಇಡಿ/ಸಾ.ಸ.6:07(2020)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಡಿ.ಎಸ್.ಟಿ ಪರ್ಸ್ ಪ್ರಯೋಗಾಲಯಕ್ಕೆ ಕಾನ್ಫೋಕಲ್ ಮೈಕ್ರೋಸ್ಕೋಪ್‌ನ್ನು ಸ್ಥಾಪಿಸಲು ಕೊಠಡಿಯ ನಿರ್ಮಾಣ ಕಾಮಗಾರಿ – ಟೆಂಡರ್ ಅಂಗೀಕರಿಸುವ ಬಗ್ಗೆ.

ನಿರ್ಣಯ: ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಮಂವಿ/ಇಡಿ/ಸಾ.ಸ.6:08(2020)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಉದ್ಯೋಗಸ್ಥ ಮಹಿಳೆಯರ

| | |
|---|---|
| | ವಸತಿನಿಲಯದ 'F wing'ನ ಛಾವಣಿಗೆGalvalume sheet ಅಳವಡಿಸುವ ಕಾಮಗಾರಿ–ಟೆಂಡರ್ ಅಂಗೀಕರಿಸುವ ಬಗ್ಗೆ. |
| **ನಿರ್ಣಯ:** | ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | ಮಂವಿ/ಇಡಿ/ಸಾ.ಸ.6:09(2020) |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯ ಆವರಣದ Botany ವಿಭಾಗದಲ್ಲಿResearch Lab ಹಾಗೂInstrumentation Lab, MuseumಹಾಗೂHarbarium Lab ಗಳ ಮಧ್ಯೆ ಅಲ್ಯುಮೀನಿಯಂ ವಿಭಾಜಕ ಅಳವಡಿಸುವ ಕಾಮಗಾರಿ– ಟೆಂಡರ್ ಅಂಗೀಕರಿಸುವ ಬಗ್ಗೆ. |
| **ನಿರ್ಣಯ:** | ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | ಮಂವಿ/ಇಡಿ/ಸಾ.ಸ.6:10(2020) |
| **ವಿಷಯ:** | ಜೀವ ವಿಜ್ಞಾನ ವಿಭಾಗ ಕಟ್ಟಡದ ಒಳಭಾಗದ ತೆರೆದ ಆವರಣದ ಭಾಗದಲ್ಲಿ (Open to Sky) Quadrangleಗಾರ್ಡನ್‌ನ್ನು ನವೀಕರಿಸುವ ಕಾಮಗಾರಿ. –ಟೆಂಡರ್ ಅಂಗೀಕರಿಸುವ ಬಗ್ಗೆ. |
| **ನಿರ್ಣಯ:** | ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.<br>ಸದರಿ ಕಾಮಗಾರಿಗೆ ಸಂಬಂಧಿಸಿ, ಗಾರ್ಡನ್ ನಿರ್ಮಿಸುವಾಗ ಕಾಂಕ್ರೀಟ್ ಬೆಂಚುಗಳನ್ನು ಅಳವಡಿಸಿಕೊಂಡು ಪರಿಸರದ ಹಸಿರೀಕರಣದೊಂದಿಗೆ ಕ್ರಮಕ್ಯಗೊಳ್ಳಲು ನಿರ್ಧರಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | ಮಂವಿ/ಇಡಿ/ಸಾ.ಸ.6:11(2020) |
| **ವಿಷಯ:** | Providing and laying Interlock tiles in front of Mangala Auditorium Building at Mangalore University Campus Mangalagangothri **ಟೆಂಡರ್ ಅಂಗೀಕರಿಸುವ ಬಗ್ಗೆ.** |
| **ನಿರ್ಣಯ:** | ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | ಮಂವಿ/ಇಡಿ/ಸಾ.ಸ.6:12(2020) |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ವಿಶ್ವಮಂಗಳ ವಿದ್ಯಾ ಸಂಸ್ಥೆಯಲ್ಲಿ ಶಾಲಾ ಕೊಠಡಿ ನಿರ್ಮಾಣ–ಅಂದಾಜು ಪಟ್ಟಿ ಅನುಮೋದನೆ ಬಗ್ಗೆ. ಅಂದಾಜುಪಟ್ಟಿ ಮೊತ್ತ ₹ 11.43 ಲಕ್ಷ |
| **ನಿರ್ಣಯ:** | ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | ಮಂವಿ/ಇಡಿ/ಸಾ.ಸ.6:13(2020) |
| **ವಿಷಯ:** | Construction of Pavilion for the Play ground of Mangalore University Campus Mangalagangothri - ಹೆಚ್ಚುವರಿ ಪರಿಮಾಣ(Excess Quantity) ಮತ್ತು ಹೆಚ್ಚುವರಿ ಐಟಂ (E.I.R.L.)ಸಹಿತ ನಿರ್ವಹಿಸಿದ ಟೆಂಡರು ಕಾಮಗಾರಿ ಮೊತ್ತಕ್ಕೆ ಅನುಮೋದನೆ ನೀಡುವ ಬಗ್ಗೆ. |
| **ನಿರ್ಣಯ:** | ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. |
| **ಕಾರ್ಯಸೂಚಿ ಸಂಖ್ಯೆ:** | ಮಂವಿ/ಇಡಿ/ಸಾ.ಸ.6:14(2020) |
| **ವಿಷಯ:** | Construction of Sump Tank 50 KL capacity to the Lecture Complex located at Mangalore University- ಹೆಚ್ಚುವರಿ ಪರಿಮಾಣ(Excess Quantity) |

ಮೊತ್ತ ಹಾಗೂ ನಿರ್ವಹಿಸಿದ ಟೆಂಡರು ಕಾಮಗಾರಿ ಮೊತ್ತಕ್ಕೆ ಅನುಮೋದನೆ ಬಗ್ಗೆ.

ನಿರ್ಣಯ: ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಮಂವಿ/ಇಡಿ/ಸಾ.ಸ.6:15(2020)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಮುಖ್ಯ ನೀರು ಸರಬರಾಜು ವ್ಯವಸ್ಥೆಯ ಮುನ್ನೂರು ಪಂಪು ಸ್ಥಾವರದಲ್ಲಿ 60 ಅಶ್ವ ಶಕ್ತಿಯ Vertical turbine ಪಂಪ್‌ನ್ನು Electrical control panel board ಮತ್ತು FCMAStarter panelಸಮೇತ ಒದಗಿಸಿ ಅಳವಡಿಸುವುದು – ಮಾರ್ಪಾಡಿತ ಅಂದಾಜುಪಟ್ಟಿಗೆ (Modified Estimate) ಅನುಮೋದನೆಯ ಬಗ್ಗೆ.

ನಿರ್ಣಯ: ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಮಂವಿ/ಇಡಿ/ಸಾ.ಸ.6:16(2020)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿ Food courtನಿರ್ಮಾಣಕ್ಕಾಗಿ ಮಂಗಳ ಕ್ಯಾಂಟೀನ್‌ನ ಹಿಂಭಾಗದಲ್ಲಿ ವಿಸ್ತರಣಾ ಕಾಮಗಾರಿ – ಅಂದಾಜುಪಟ್ಟಿ ಅನುಮೋದನೆ ಬಗ್ಗೆ. – ಅಂದಾಜು ಮೊತ್ತ: 33,40,000.00

ನಿರ್ಣಯ: ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು ಮತ್ತು ಮೇಲ್ಛಾವಣಿಯ ಮಾದರಿಯನ್ನು ಈಗಿನ ಬದಲಾವಣೆಗೆ ಹೊಂದಿಕೊಂಡು ಅಳವಡಿಸಿಕೊಳ್ಳುವಂತೆ ಸೂಚಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಮಂವಿ/ಇಡಿ/ಸಾ.ಸ.6:17(2020)

ವಿಷಯ: Construction of Botany Block at Mangalore University Campus Mangalagangothri -ಹೆಚ್ಚುವರಿ ಪರಿಮಾಣ(Excess Quantity)ಹಾಗೂ ಹೆಚ್ಚುವರಿ ಐಟಂ (E.I.R.L) ಸಹಿತ ನಿರ್ವಹಿಸಿದ ಟೆಂಡರ್ ಕಾಮಗಾರಿ ಮೊತ್ತಕ್ಕೆ ಅನುಮೋದನೆ ಬಗ್ಗೆ.

ನಿರ್ಣಯ: ಹೆಚ್ಚುವರಿ ಮಾಹಿತಿಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದೂಡಲಾಯಿತು

ಕಾರ್ಯಸೂಚಿ ಸಂಖ್ಯೆ: ಮಂವಿ/ಇಡಿ/ಸಾ.ಸ.6:18(2020)

ವಿಷಯ: Construction of Animal House for CARRT Project in Mangalore University – ಹೆಚ್ಚುವರಿ ಪರಿಮಾಣ(Excess Quantity)ಹಾಗೂ ಹೆಚ್ಚುವರಿ ಐಟಂ (E.I.R.L) ಸಹಿತ ನಿರ್ವಹಿಸಿದ ಟೆಂಡರ್ ಕಾಮಗಾರಿಯ ಮೊತ್ತಕ್ಕೆ ಅನುಮೋದನೆ ಬಗ್ಗೆ.

ನಿರ್ಣಯ: ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಮಂವಿ/ಇಡಿ/ಸಾ.ಸ.6:19(2020)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ನೇತ್ರಾವತಿ ಅತಿಥಿ ಗೃಹದ 1ನೇ ಮಹಡಿಯ (ಉಳಿದ ಭಾಗ) ನಿರ್ಮಾಣ ಕಾಮಗಾರಿ – ಹೆಚ್ಚುವರಿ ಪರಿಮಾಣ(Excess Quantity)ಹಾಗೂ ಹೆಚ್ಚುವರಿ ಐಟಂ (E.I.R.L) ಸಹಿತ ನಿರ್ವಹಿಸಿದ ಟೆಂಡರ್ ಕಾಮಗಾರಿಯ ಮೊತ್ತಕ್ಕೆ ಅನುಮೋದನೆ ಬಗ್ಗೆ.

ನಿರ್ಣಯ: ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಮಂವಿ/ಇಡಿ/ಸಾ.ಸ.6:20(2020)

ವಿಷಯ: Construction of Store room for Bioscience Department and Construction of first floor to the Indoor Stadium- ಹೆಚ್ಚುವರಿ ಪರಿಮಾಣ

ಮೊತ್ತ(Excess Quantity) – ಹೆಚ್ಚುವರಿ ಐಟಂ (E.I.R.L) ಸಹಿತ ನಿರ್ವಹಿಸಿದ ಟೆಂಡರ್ ಕಾಮಗಾರಿಯ ಮೊತ್ತಕ್ಕೆ ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ/ಸಾ.ಸ.6:21(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಪುರುಷರ ವಸತಿನಿಲಯದ ನವೀಕರಣ ಕಾಮಗಾರಿ (Old block)ಹೆಚ್ಚುವರಿ ಪರಿಮಾಣ ಮೊತ್ತ (Excess Quantity) – ಸಹಿತ ನಿರ್ವಹಿಸಿದ ಟೆಂಡರ್ ಕಾಮಗಾರಿ ಮೊತ್ತಕ್ಕೆ ಅನುಮೋದನೆಯ ಬಗ್ಗೆ.

**ನಿರ್ಣಯ:** ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ/ಸಾ.ಸ.6:22(2020)

**ವಿಷಯ:** Extension of Management block & Construction of class rooms over the first floor at University College, Mangalore (Package Work) – **ಕಾಲಾವಧಿ ವಿಸ್ತರಣೆ ಅನುಮೋದನೆಯ ಬಗ್ಗೆ.**

**ನಿರ್ಣಯ:** ದಿನಾಂಕ 12.10.2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ/ಸಾ.ಸ.6:23(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಬಂಟ್ವಾಳ ತಾಲೂಕಿನ ಮುನ್ನೂರುನಲ್ಲಿರುವ ನೀರು ಸರಬರಾಜು ಸಿಬ್ಬಂದಿಗಳ ಪಾಳು ಬಿದ್ದಿರುವ ವಸತಿಗೃಹಗಳ ವಿಲೇವಾರಿ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿಸಾ.ಸ.6:24(2020)

**ವಿಷಯ:** ಇಸಿಆರ್ ಇನ್ಸಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಕೋಟೇಶ್ವರ ಎಂಬ ವಿದ್ಯಾಸಂಸ್ಥೆಯ ಸ್ಥಳ ಬದಲಾವಣೆ ಬಗ್ಗೆ.

**ನಿರ್ಣಯ:** ಸದರಿ ವಿದ್ಯಾಸಂಸ್ಥೆಯನ್ನು ಇಸಿಆರ್ ಇನ್ಸಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಮಧುವನ, ಮಂದಾರ್ತಿ ರೋಡ್, ಆಚಲಾಡಿ ವಿಲೇಜ್, ಬ್ರಹ್ಮಾವರ ತಾಲೂಕು ಉಡುಪಿ ಎಂಬ ವಿಳಾಸಕ್ಕೆ ಸ್ಥಳಾಂತರ ಮಾಡುವ ಬಗ್ಗೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಪರಿಗಣಿಸಿ, ಈ ಬಗ್ಗೆ ಅನುಮತಿಗಾಗಿ ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿಸಾ.ಸ.6:25(2020)

**ವಿಷಯ:** ತ್ರಿಷಾ ಕಾಲೇಜ್ ಆಫ್ ಕಾಮರ್ಸ್ ಆಂಡ್ ಮ್ಯಾನೇಜ್‌ಮೆಂಟ್, ಉಡುಪಿ ಮತ್ತು ತ್ರಿಷಾ ಈವ್‌ನಿಂಗ್ ಕಾಲೇಜು, ಉಡುಪಿ ಎಂಬ ವಿದ್ಯಾಸಂಸ್ಥೆಗಳ ಸ್ಥಳ ಬದಲಾವಣೆ ಬಗ್ಗೆ.

**ನಿರ್ಣಯ:** ಸದರಿ ವಿದ್ಯಾಸಂಸ್ಥೆಗಳನ್ನು ಮಟ್ಟು ರೋಡ್, ಕಟಪಾಡಿ ಬಸ್‌ಸ್ಟಾಂಡ್ ಸಮೀಪ, ಕಟಪಾಡಿ ಎಂಬ ವಿಳಾಸಕ್ಕೆ ಸ್ಥಳಾಂತರ ಮಾಡುವ ಬಗ್ಗೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಪರಿಗಣಿಸಿ, ಈ ಬಗ್ಗೆ ಅನುಮತಿಗಾಗಿ ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್‌ಸಾ.ಸ.6:26(2020)

**ವಿಷಯ:** ಪದವಿ ಮಟ್ಟದ ಭಾರತ ಸಂವಿಧಾನ, ಮಾನವ ಹಕ್ಕುಗಳು ಮತ್ತು ಪರಿಸರ ಅಧ್ಯಯನ ಮಂಡಳಿಯನ್ನು ಪದವಿ ಮಟ್ಟದ ಭಾರತ ಸಂವಿಧಾನ, ಮಾನವ ಹಕ್ಕುಗಳು, ಲಿಂಗ ಸಮಾನತೆ ಮತ್ತು ಪರಿಸರ ಅಧ್ಯಯನ ಮಂಡಳಿ" ಎಂದು ಮರುನಾಮಕರಣ ಮಾಡುವ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು "ಪದವಿ ಮಟ್ಟದ ಭಾರತ ಸಂವಿಧಾನ, ಮಾನವ ಹಕ್ಕುಗಳು,

ಲಿಂಗ ಸಮತೆ/ಸಮಾನತೆ (Gender Equity) ಮತ್ತು ಪರಿಸರ ಸಂಯುಕ್ತ ಅಧ್ಯಯನ ಮಂಡಳಿ'' ಎಂದು ಮರು ನಾಮಕರಣಗೊಳಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್‌ಸಾ.ಸ.6:27(2020)
**ವಿಷಯ:** ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಪುನರ್‌ರಚನೆಯ ಬಗ್ಗೆ.
**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್‌ಸಾ.ಸ.6:28(2020)
**ಸಭೆಯ ದಿನಾಂಕ:** 28.10.2020
**ವಿಷಯ:** ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟ್ ಸದಸ್ಯರು, ಇವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು.
**ನಿರ್ಣಯ:** Kodava Language and Culture Certificate, Diploma, Advanced Diploma ಕಾರ್ಯಕ್ರಮಗಳು ಮತ್ತು ಯುಜಿಸಿ ವೃತ್ತಿ ಆಧಾರಿತ (add-on) ಕಾರ್ಯಕ್ರಮಗಳನ್ನು ಶೈಕ್ಷಣಿಕ ವರ್ಷ 2020–21ನೇ ಸಾಲಿನಲ್ಲಿ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಮತ್ತು ಎಫ್. ಎಂ. ಕೆ. ಎಂ. ಸಿ. ಕಾಲೇಜು, ಮಡಿಕೇರಿ ಇಲ್ಲಿ ಪ್ರಾರಂಭಿಸಬೇಕೆಂದು ಸಿಂಡಿಕೇಟು ನಿರ್ಣಯಿಸಿತು. ಪಿ.ಜಿ. ಡಿಪ್ಲೊಮಾ ಕಾರ್ಯಕ್ರಮಕ್ಕೆ ಪಠ್ಯಕ್ರಮ ತಯಾರಿಸಲು ಕ್ರಮ ಕೈಗೊಳ್ಳುವಂತೆ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್‌ಸಾ.ಸ.6:29(2020)
**ಸಭೆಯ ದಿನಾಂಕ:** **28.10.2020**
**ವಿಷಯ:** ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟ್ ಸದಸ್ಯರು, ಇವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು.

1. ಆದಿ ಕವಿ ಹರದಾಸ ಅಪ್ಪಚ್ಚ ಕವಿಯ ಪೀಠವನ್ನು ಮಂಗಳೂರು ವಿಶ್ವವಿದ್ಯಾನಿಲಯದ ಮೂಲಕ ಸ್ಥಾಪಿಸುವ ಬಗ್ಗೆ

**ನಿರ್ಣಯ:** ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮೂಲಧನವನ್ನು ದಾನಿಗಳಿಂದ/ಇತರೇ ಮೂಲಗಳಿಂದ ಸಂಗ್ರಹಿಸಿಕೊಂಡು, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

2. ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜಿನಲ್ಲಿ ತುಂಬಾ ಕಡಿಮೆ ಖಾಯಂ ಸಿಬ್ಬಂದಿ/ಶಿಕ್ಷಕರು ಇರುವ ಬಗ್ಗೆ ಕ್ರಮ ಕೈಗೊಳ್ಳುವ ಬಗ್ಗೆ.

**ನಿರ್ಣಯ:** ವರ್ಗಾವಣಾ ನೀತಿಗಳಿಗೆ ಸಂಬಂಧಿಸಿ, ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ರಚಿಸಲಾಗಿರುವ ಸಮಿತಿಯ ಶಿಫಾರಸ್ಸಿನ ಮೇರೆಗೆ ಅತೀ ಶೀಘ್ರದಲ್ಲಿ ಕ್ರಮ ಕೈಗೊಳ್ಳಲಾಗುವುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್‌ಸಾ.ಸ.6:30(2020)
**ಸಭೆಯ ದಿನಾಂಕ:** **28.10.2020**
**ವಿಷಯ:** ಶ್ರೀ. ಶ್ರೀವರ್ಮ ಅಜ್ರಿ ಎಂ. ಸಿಂಡಿಕೇಟ್ ಸದಸ್ಯರು, ಇವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು.
**ನಿರ್ಣಯ:** ಪದವಿ ಮಟ್ಟದ ಕಾರ್ಯಕ್ರಮಗಳಿಗೆ ಅಳವಡಿಸಲಾಗಿರುವ ಇಂಗ್ಲೀಷ್ ಭಾಷಾ ವಿಷಯದ ಪಠ್ಯಕ್ರಮಕ್ಕೆ ಸಂಬಂಧಿಸಿ, ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ, ಉದ್ಯೋಗ ಕೌಶಲ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಸದರಿ ಪಠ್ಯಕ್ರಮವನ್ನು ಸರಳೀಕರಿಸಲು ಕ್ರಮ ಕೈಗೊಳ್ಳುವಂತೆ ಪದವಿ ಮಟ್ಟದ ಇಂಗ್ಲೀಷ್ ಅಧ್ಯಯನ ಮಂಡಳಿಯ ಅಧ್ಯಕ್ಷರಿಗೆ ಸೂಚಿಸಲು ಸಿಂಡಿಕೇಟು ನಿರ್ಣಯಿಸಿತು.

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಸಿಂಡಿಕೇಟ್‌ಸಾ.ಸ.6:31(2020) |
| **ಸಭೆಯ ದಿನಾಂಕ:** | **28.10.2020** |
| **ವಿಷಯ:** | ಡಾ. ಎಂ.ಎಸ್. ತಳವಾರ್, ಸಿಂಡಿಕೇಟ್ ಸದಸ್ಯರು, ಇವರು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ. |
| **ನಿರ್ಣಯ:** | ಪ್ರಸ್ತಾವನೆಯ ಕ್ರಮ ಸಂಖ್ಯೆ 1 ಕ್ಕೆ ಸಂಬಂಧಿಸಿ, ಎಂ.ಎಸ್ಸಿ. ಭೂಗೋಳಶಾಸ್ತ್ರ, ಬಿ.ಪಿ.ಎಡ್., ಎಂ. ಎಡ್., ಮುಂತಾದ ಕಾರ್ಯಕ್ರಮಗಳಿಗೆ Redeployment ಮಾಡಿ ಪ್ರತ್ಯೇಕ ವಿಭಾಗ ರಚಿಸಲು ಸಂಬಂಧಿಸಿದ ಅನುಶಾಸನವನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲು ಸೂಕ್ತಕ್ರಮ ಕೈಗೊಳ್ಳಲು ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಡಿಇವಿ ಸಾ.ಸ.6:32(2020) |
| **ವಿಷಯ:** | ಗ್ರಾಮೀಣ ಬ್ಯಾಂಕಿಂಗ್ ಮತ್ತು ನಿರ್ವಹಣಾ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿ ತಾತ್ಕಾಲಿಕ ನೆಲೆಯಲ್ಲಿ ಬೆರಳಚ್ಚುಗಾರ-ವ-ಗುಮಾಸ್ತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಎಂ. ಸೀತಾರಾಮ ಇವರು ತಮ್ಮ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ ಹೂಡಿರುವ ದಾವೆಗೆ ಸಂಬಂಧಿಸಿ ವಿಶ್ವವಿದ್ಯಾನಿಲಯವು ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿ ಸಂಖ್ಯೆ: ಡಬ್ಲ್ಯೂಎ: 3659/2012 (ಎಸ್-ಆರ್ಇಎಸ್) ದಿನಾಂಕ 23.10.2019ರ ತೀರ್ಪಿನ ಅನುಷ್ಠಾನದ ಕುರಿತು ವಿಶ್ವವಿದ್ಯಾನಿಲಯ ವತಿಯಿಂದ ಪಡೆದುಕೊಂಡ ಕಾನೂನು ಅಭಿಪ್ರಾಯದಂತೆ ನಿವೃತಿ ಸೌಲಭ್ಯಗಳನ್ನು ನೀಡುವ ಬಗ್ಗೆ. |
| **ನಿರ್ಣಯ:** | ಈ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ಮಾನ್ಯ ಉಚ್ಚನ್ಯಾಯಾಲಯದ ತೀರ್ಪನ್ನು ಗಮನಿಸಿಕೊಂಡು ಸದರಿ ಪ್ರಕರಣವನ್ನು ವಿಶೇಷ ನೆಲೆಯಲ್ಲಿ ಪರಿಗಣಿಸಲಾಯಿತು. ಅದರಂತೆ, ಸದರಿಯವರು ಸೇವೆಗೆ ಸೇರಿದ ದಿನಾಂಕವನ್ನು 25.11.1985 ಎಂದು ಪರಿಗಣಿಸಿ, ಲಭಿಸಬಹುದಾದ ಪಿಂಚಣಿ ಮೊತ್ತ ರೂ. 6,93,000.00 ಮತ್ತು ಉಪದಾನ ರೂ. 8,24,040.00 ವನ್ನು ಸೇರಿಸಿ ಒಟ್ಟು ಮೊತ್ತ ರೂ. 15,17,040.00 (ರೂಪಾಯಿ ಹದಿನೈದು ಲಕ್ಷದ ಹದಿನೇಳು ಸಾವಿರದ ನಲವತ್ತು ಮಾತ್ರ)ನ್ನು ಏಕಗಂಟಿನಲ್ಲಿ ಪಾವತಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಇದರ ಹೊರತಾಗಿ ವಿಶ್ವವಿದ್ಯಾನಿಲಯದಿಂದ ಯಾವುದೇ ಆರ್ಥಿಕ ಸೌಲಭ್ಯಕ್ಕೆ ಅರ್ಹರಲ್ಲದಾಗಿ ಈ ಬಗ್ಗೆ ಸದರಿಯವರಿಂದ ಅಫಿದಾವಿತ್ತನ್ನು ಕಡ್ಡಾಯವಾಗಿ ಪಡೆದುಕೊಂಡು ಪಾವತಿಸಬಹುದೆಂಬುದಾಗಿ ಹಾಗೂ ನಿರ್ಣಯವನ್ನು ಯಾವುದೇ ಕಾರಣಕ್ಕೂ ಪೂರ್ವನಿದರ್ಶನವೆಂದು ಪರಿಗಣಿಸತಕ್ಕದ್ದಲ್ಲ ಎಂದು ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಸಿಂಡಿಕೇಟು ಸಾ.ಸ.6:33(2020) |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಪ್ರಭಾರ ಅಧ್ಯಕ್ಷರ ನೇಮಕಾತಿ ಬಗ್ಗೆ. |
| **ನಿರ್ಣಯ:** | ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಡಿಇವಿ ಸಾ.ಸ.6:34(2020) |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯದ CARER ಇಲ್ಲಿಗೆ ತಾತ್ಕಾಲಿಕ ನೆಲೆಯಲ್ಲಿ Scientific Officer/Consultantಗಳನ್ನು ನೇಮಿಸಿಕೊಳ್ಳುವ ಬಗ್ಗೆ. |
| **ನಿರ್ಣಯ:** | CARER ಇಲ್ಲಿಗೆ ತಾತ್ಕಾಲಿಕ ನೆಲೆಯಲ್ಲಿ Scientific Officer/Consultantಗಳನ್ನು ನೇಮಿಸಿಕೊಳ್ಳಲು ಅನುಮತಿ ನೀಡಲಾಯಿತು. ಹಾಗೂ CARER ನ Corpus fund ನ ಆದಾಯವನ್ನು ಬಳಸಿ ಸದರಿ Scientific Officer/Consultantಗಳಿಗೆ ಸೂಕ್ತ ಸಂಭಾವನೆ ಪಾವತಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಡಿಇವಿ ಸಾ.ಸ.6:35(2020) |
| **ವಿಷಯ:** | ಗಣಕಯಂತ್ರ ಕೇಂದ್ರ – Firewall ನ ವಾರ್ಷಿಕ ನಿರ್ವಹಣಾ ವೆಚ್ಚಕ್ಕೆ ಮಂಜೂರಾತಿ ನೀಡುವ ಪ್ರಸ್ತಾವನೆ ಬಗ್ಗೆ. |
| **ನಿರ್ಣಯ:** | ದಿನಾಂಕ 21.10.2020ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಸಿಬ್ಬಂದಿ ಸಾ.ಸ.6:36(2020) |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ಕೇಂದ್ರದ ನಿರ್ದೇಶಕರ ನೇಮಕಾತಿ ಬಗ್ಗೆ. |
| **ನಿರ್ಣಯ:** | ಪ್ರೊ. ವೈ. ಸಂಗಪ್ಪ, ಪ್ರಾಧ್ಯಾಪಕರು, ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ದೂರ ಶಿಕ್ಷಣ ಕೇಂದ್ರದ ನಿರ್ದೇಶಕರನ್ನಾಗಿ ಮುಂದಿನ ಆದೇಶದವರೆಗೆ ನೇಮಕಾತಿ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಸಿಬ್ಬಂದಿ ಸಾ.ಸ.6:37(2020) |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯ ಘಟಕ ಕಾಲೇಜಿನಿಂದ ಸ್ನಾತಕೋತ್ತರ ವಿಭಾಗದಲ್ಲಿ ನಿಯೋಜನೆ ಮೇರೆಗೆ ಸೇವೆ ಸಲ್ಲಿಸಿದ ಅವಧಿಯಲ್ಲಿ ಕಾಲೇಜಿನಲ್ಲಿ ಸಾಧಿಸಬೇಕಾದ ವೇತನ ಪಾವತಿಸುವ ಬಗ್ಗೆ. |
| **ನಿರ್ಣಯ:** | ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಸಿಬ್ಬಂದಿ ಸಾ.ಸ.6:38(2020) |
| **ವಿಷಯ:** | ಶ್ರೀ ಗೋವಿಂದ ಮಟ್ಟಿ, ಹಿರಿಯ ಸಹಾಯಕರು (ನಿವೃತ), ಇವರ ವರ್ಗಾವಣೆಗೊಂಡ ಕಚೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗದೆ ಇರುವ ಅವಧಿಯ ಪರಿಗಣನೆ ಬಗ್ಗೆ. |
| **ನಿರ್ಣಯ:** | ಈ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಕರಣವನ್ನು ವಿಶೇಷ ನೆಲೆಯಲ್ಲಿ ಪರಿಗಣಿಸಿ, ಸದರಿಯವರ ಒಟ್ಟು ಗೈರು ಹಾಜರಿ ಅವಧಿಯ 408 ದಿನಗಳಲ್ಲಿ ಖಾತೆಯಲ್ಲಿರುವ 288 (ಗಳಿಕೆ ರಜೆ) ಮತ್ತು 24 (ಪರಿವರ್ತಿತ ರಜೆ) ಒಟ್ಟು 312 ದಿನಗಳನ್ನು ಕಳೆದು ಉಳಿದ 96 ದಿನಗಳನ್ನು ವೇತನ ರಹಿತ ರಜೆ ಎಂದು ಪರಿಗಣಿಸುವಂತೆ ಸಿಂಡಿಕೇಟು ನಿರ್ಣಯಿಸಿತು. ನಿರ್ಣಯವನ್ನು ಯಾವುದೇ ಕಾರಣಕ್ಕೂ ಪೂರ್ವನಿದರ್ಶನವೆಂದು ಪರಿಗಣಿಸತಕ್ಕದ್ದಲ್ಲ ಎಂದು ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಸಿಂಡಿಕೇಟ್ ಸಾ.ಸ.6:39(2020) |
| **ವಿಷಯ:** | ಶ್ರೀ. ವಿವೇಕಾನಂದ ಪನಿಯಾಲ, ಸಿಂಡಿಕೇಟ್ ಸದಸ್ಯರು, ಇವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು. |
| **ನಿರ್ಣಯ:** | ಈ ಬಗ್ಗೆ ಸಿಂಡಿಕೇಟಿನ ವಿಶೇಷ ಸಭೆಯಲ್ಲಿ ಚರ್ಚಿಸಬಹುದೆಂಬುದಾಗಿ ನಿರ್ಣಯಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಸಿಂಡಿಕೇಟ್ಸಾ.ಸ.6:40(2020) |
| **ಸಭೆಯ ದಿನಾಂಕ:** | **28.10.2020** |
| **ವಿಷಯ:** | ಶ್ರೀ. ರಮೇಶ ಕೆ. ಸಿಂಡಿಕೇಟ್ ಸದಸ್ಯರು, ಇವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು. |
| **ನಿರ್ಣಯ:** | ಪ್ರಸ್ತಾವನೆ 1 (ಅ) (ಆ) (ಇ) (ಈ) ಮತ್ತು (ಉ) ಕ್ಕೆ ಸಂಬಂಧಿಸಿ, ಕಾಮಗಾರಿಗಳು ಪ್ರಗತಿಯಲ್ಲಿದ್ದು, ಈಗಾಗಲೇ ಎರಡು ಸಂಖ್ಯೆಗಳ ಕೊಠಡಿಗಳು ಪೂರ್ಣಗೊಂಡಿವೆ. 07 ಸಂಖ್ಯೆಗಳ ಕೊಠಡಿಗಳು ಡಿಸೆಂಬರ್ ತಿಂಗಳ ಅಂತ್ಯದೊಳಗೆ ಪೂರ್ಣಗೊಳ್ಳುವುದು. 03 ಸಂಖ್ಯೆಯ ಕೊಠಡಿಗಳ ಕಾಮಗಾರಿಯನ್ನು RUSA ಅನುದಾನದಲ್ಲಿ ಪ್ರಾರಂಭಿಸಲಾಗುವುದು. ಪ್ರಾಸ್ತಾವಿತ ತರಗತಿ ಕೊಠಡಿಗಳು ಪೂರ್ಣಗೊಂಡ ನಂತರ ತರಗತಿ ಕೊಠಡಿಗಳ ಕೊರತೆ ಕಡಿಮೆಯಾಗುವುದು. ಅನುದಾನದ ಕೊರತೆಯಿಂದ ಕಾಮಗಾರಿ ಸ್ಥಗಿತಗೊಂಡಿರುತ್ತದೆ. ಎಂಬ ಮಾಹಿತಿಯನ್ನು ಸಿಂಡಿಕೇಟು ಸಭೆಗೆ ನೀಡಲಾಯಿತು. (ಊ) ಗೆ ಸಂಬಂಧಿಸಿ, ನಿವೇಶನದ ಖಾತಾ ಬದಲಾವಣೆಗೆ ಕ್ರಮ ಕೈಗೊಳ್ಳಬೇಕೆಂದು ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಪಿ.ಎಂ.ಇ.ಬಿ. ಸಾ.ಸ.6:41(2020) |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯ ವಿವಿಧ ವಿಭಾಗ/ಕಛೇರಿಗಳಿಗೆ ಬೇಕಾಗಿರುವ ಉಪಕರಣಗಳನ್ನು ರೂಸಾ ಅನುದಾನದಿಂದ ಖರೀದಿಸುವ ಪ್ರಸ್ತಾವನೆ ಬಗ್ಗೆ. |
| **ನಿರ್ಣಯ:** | ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಸದರಿ ಪ್ರಸ್ತಾವನೆಯ ಕ್ರಮ |

ಸಂಖ್ಯೆ 4 ಮತ್ತು 5 ಕ್ಕೆ ಸಂಬಂಧಿಸಿ, ಸದರಿ ಉಪಕರಣಗಳ ಅಗತ್ಯತೆಯ ನಿಖರ ಮಾಹಿತಿಯನ್ನು ಪಡೆದುಕೊಂಡು ಮುಂದಿನ ಸಭೆಗೆ ಮಂಡಿಸಲು ಸಿಂಡಿಕೇಟು ನಿರ್ಣಯಿಸಿತು. ಉಳಿದಂತೆ ದಿನಾಂಕ 21.10.2020ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪಿ.ಎಂ.ಇ. ಬಿ. ಸಾ.ಸ.6:42(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ವಿವಿಧ ವಿಭಾಗಗಳಿಗೆ/ ಕಛೇರಿಗಳಿಗೆ ಬೇಕಾಗಿರುವ Students Tables, Chairs and Stools ಗಳನ್ನು ರೂಸಾ ಅನುದಾನದಿಂದ ಖರೀದಿಸುವ ಪ್ರಸ್ತಾವನೆ ಬಗ್ಗೆ.
**ನಿರ್ಣಯ:** ದಿನಾಂಕ 21.10.2020ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪಿ.ಎಂ.ಇ.ಬಿ. ಸಾ.ಸ.6:43(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಗಂಥಾಲಯಕ್ಕೆ ಅಗತ್ಯವಿರುವ ಒಂದು ಸಂಖ್ಯೆಯ Ithenticate Turnitin Plagiarism Softwareನ ಖರೀದಿ ಪ್ರಸ್ತಾವನೆ ಬಗ್ಗೆ.
**ನಿರ್ಣಯ:** ದಿನಾಂಕ 21.10.2020ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.
ಸದರಿ ಸಾಫ್ಟ್‌ವೇರ್‌ನ ಉಪಯುಕ್ತತೆಯ ಅಂಕಿಅಂಶಗಳನ್ನು ಕಡ್ಡಾಯವಾಗಿ ನಿರ್ವಹಿಸುವುದು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.6:44(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2021ನೇ ಸಾಲಿನ ಡೈರಿ ಮತ್ತು ಕ್ಯಾಲೆಂಡರ್ ಮುದ್ರಣದ ಕುರಿತು.
**ನಿರ್ಣಯ:** ದಿನಾಂಕ 21.10.2020ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.6:45(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಲ್ಯಾಪ್‌ಟಾಪ್‌ಗಳನ್ನು ಖರೀದಿಸುವ ಬಗ್ಗೆ.
**ನಿರ್ಣಯ:** ದಿನಾಂಕ 21.10.2020ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.6:46(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಆನ್‌ಲೈನ್ ಸಭೆಗಳನ್ನು ನಡೆಸಲು Video Conference ಕೊಠಡಿಗೆ Webex License ಪಡೆಯುವ ಬಗ್ಗೆ.
**ನಿರ್ಣಯ:** ಅನುಮೋದಿಸಲಾಯಿತು.

**ಇತರ ವಿಷಯಗಳು:**

1. ಸಿಂಡಿಕೇಟು ಸಭೆಯಲ್ಲಿ ಕೈಗೊಂಡಿರುವ ನಿರ್ಣಯಗಳನ್ನು ಮುಂದಿನ ಸಿಂಡಿಕೇಟು ಸಭೆಯಲ್ಲಿ ದೃಢೀಕರಿಸುವ ಸಂದರ್ಭದಲ್ಲಿ ವಸ್ತುಸ್ಥಿತಿ ಬದಲಾವಣೆಗೆ ಅವಕಾಶ ನೀಡಬಾರದೆಂಬುದಾಗಿ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.
2. ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಕಾಲೇಜುಗಳಿಗೆ ಸುತ್ತೋಲೆ ಮುಖಾಂತರ ಸಂಯೋಜನೆಗೊಳಪಟ್ಟ ಕಾರ್ಯಕ್ರಮಗಳನ್ನು ಮಾತ್ರ ತಮ್ಮ ನಾಮಫಲಕದಲ್ಲಿ ಅಳವಡಿಸುವಂತೆ ಸೂಚಿಸಲು ನಿರ್ಣಯಿಸಲಾಯಿತು. ತಪ್ಪಿದಲ್ಲಿ ಸದರಿಯವರುಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ನಿರ್ಣಯಿಸಲಾಯಿತು. ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡುವಂತೆ ನಿರ್ಣಯಿಸಲಾಯಿತು.

3. ಸಿಂಡಿಕೇಟು ಸಭೆಗಳನ್ನು ನಡೆಸಲು ರಾಜ್ಯಪಾಲರ ಕಛೇರಿಯಿಂದ ಸ್ವೀಕೃತವಾದ ಸುತ್ತೋಲೆಯ ಬಗ್ಗೆ ಗಮನ ಸೆಳೆಯುತ್ತಾ, ಸದರಿ ಸುತ್ತೋಲೆಯಲ್ಲಿ ನಮೂದಿಸಿರುವ ವಿಷಯಗಳನ್ನು ವಿಶ್ವವಿದ್ಯಾನಿಲಯದಲ್ಲಿ ಅನುಸರಿಸುತ್ತಿರುವ STATUTE GOVERNING RULES OF BUSINESS OF THE SYNDICATE, THE ACADEMIC COUNCIL, THE FINANCE COMMITTEE AND THE FACULTIES ನಲ್ಲಿ ಅಳವಡಿಸಿ, ಅನುಶಾಸನವನ್ನು ತಿದ್ದುಪಡಿ ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.
4. ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಕಾಲೇಜು ಅಭಿವೃದ್ಧಿ ಮಂಡಳಿಯನ್ನು ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಸಿಂಡಿಕೇಟು ಮತ್ತು ಜನಪ್ರತಿನಿಧಿಗಳನ್ನೊಳಗೊಂಡಂತೆ ರಚಿಸುವಂತೆ ನಿರ್ಣಯಿಸಲಾಯಿತು.
5. ಪರೀಕ್ಷಾ ಸಂಭಾವನೆಗೆ ಸಂಬಂಧಿಸಿ, ಪ್ರಸ್ತುತ ನೀಡುತ್ತಿರುವ ಸಂಭಾವನೆಯನ್ನು ಪರಿಷ್ಕರಿಸಬೇಕಾಗಿ ಕುಲಸಚಿವರು (ಪರೀಕ್ಷಾಂಗ) ಸಭೆಗೆ ವಿನಂತಿಸಿದಾಗ, ಪ್ರಸ್ತುತ ಮೌಲ್ಯಮಾಪಕರಿಗೆ ನೀಡುತ್ತಿರುವ ಸ್ಥಳೀಯ ಭತ್ಯೆಯನ್ನು ರೂ.650/– ರಿಂದ ರೂ.750/– (LCA) ಕ್ಕೆ ಮತ್ತು ದಿನ ಭತ್ಯೆಯನ್ನು ರೂ.850/– ರಿಂದ 950/– ರಂತೆ ಶೈಕ್ಷಣಿಕ ವರ್ಷ 2020–21ನೇ ಸಾಲಿಗೆ ಮಾತ್ರ ಅನ್ವಯವಾಗುವಂತೆ ಪರಿಷ್ಕರಿಸುವ ಬಗ್ಗೆ ಸಿಂಡಿಕೇಟು ಒಪ್ಪಿಗೆ ನೀಡಿತು.
6. ವಿಶ್ವವಿದ್ಯಾನಿಲಯದ ಆಡಳಿತ ವರ್ಗ ಮತ್ತು ಶಿಕ್ಷಕ, ಸಂಶೋಧನಾ ವಿದ್ಯಾರ್ಥಿಗಳಿಗೆ ಒಂದು ಕಾನೂನು ಮಾಹಿತಿ ಕಾರ್ಯಾಗಾರ ಜಿಲ್ಲಾ ಕಾನೂನು ಸಲಹಾ ಪ್ರಾಧಿಕಾರದ ಸಹಯೋಗದೊಂದಿಗೆ ಏರ್ಪಡಿಸಬೇಕೆಂದು ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ವಿವೇಕಾನಂದ ಪನಿಯಾಲ ಇವರು ತಿಳಿಸಿದರು.
7. ಕೋವಿಡ್ –19 ರ ಹಿನ್ನೆಲೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ಮತ್ತು ಸ್ನಾತಕೋತ್ತರ ಪರೀಕ್ಷೆಗಳನ್ನು ಅತ್ಯಂತ ಸುಸೂತ್ರವಾಗಿ ನಡೆಸಿರುವುದಕ್ಕೆ ಕುಲಸಚಿವರು (ಪರೀಕ್ಷಾಂಗ) ಇವರಿಗೆ ಮಾನ್ಯ ಸಿಂಡಿಕೇಟು ಸದಸ್ಯರುಗಳು ತಮ್ಮ ಶ್ಲಾಘನೆಯನ್ನು ವ್ಯಕ್ತಪಡಿಸಿದರು.
8. ದಿನಾಂಕ 12.11.2020 ರಂದು ಸಿಂಡಿಕೇಟಿನ ಏಳನೆಯ ಸಾಮಾನ್ಯ ಸಭೆ ನಡೆಸಲು ನಿರ್ಣಯಿಸಲಾಯಿತು.

ಮಾನ್ಯ ಕುಲಪತಿಗಳು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು. |